ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 24 ನೇ ಮಾರ್ಚ್, 2020

ಮಾಲ್ ಮತ್ತು ಕಂಪನಿಗಳ ರೀಟೆಲ್ ಔಟ್‌ಲೇಟ್‌ಗಳಲ್ಲಿ ಮಾರಾಟ ಮಾಡುತ್ತಿರುವ ಕುರಿತು

ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):-

1558 (1836) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಮಾಲ್ ಮತ್ತು ಕಂಪನಿಗಳ ರೀಟೆಲ್ ಔಟ್‌ಲೆಟ್‌ಗಳಲ್ಲಿ ಮಾರಾಟ ಮಾಡುತ್ತಿರುವ ಆಹಾರ ಪದಾರ್ಥಗಳ ತನಿಖೆ ನಡೆಸುವ ಕ್ರಮ ಕುರಿತು ಸರ್ಕಾರ ಮಾರ್ಗದರ್ಶನ ನೀಡಿದೆಯೇ; ಹಾಗಿದ್ದಲ್ಲಿ, ವಿವರ ನೀಡುವುದು ;

(ಆ) ಇಂತಹ ಮಾಲ್ ಮತ್ತು ಕಂಪನಿಗಳ ರೀಟೆಲ್ ಔಟ್‌ಲೆಟ್‌ಗಳಲ್ಲಿ ಮಾರಾಟವಾಗುತ್ತಿರುವ ತರಕಾರಿ ಹಣ್ಣು, ಹಂಪಲು ಇತ್ಯಾದಿ ಬಹುಬೇಗ ಹಾಳಾಗುವ ಪದಾರ್ಥಗಳ ಗುಣಮಟ್ಟವನ್ನು ಪರೀಕ್ಷಿಸಲು ಸರ್ಕಾರ ಯಾವುದಾದರು ವ್ಯವಸ್ಥೆ ರೂಪಿಸಿದೆಯೇ; (ವಿವರ ನೀಡುವುದು)

(ಇ) ಈ ಉಭಯ ಅಂಶಗಳ ಮೇಲೆ ಕೇಂದ್ರ ಸರ್ಕಾರ ಮಾರ್ಗದರ್ಶನ /ನಿರ್ದೇಶನ ಹೊರಡಿಸಿದೆಯೇ? (ವಿವರ ನೀಡುವುದು)